ನಮ್ಮೋರು ಪಿಟ್‌ನಿಂದ ಬಕೆಟ್‌ನಲ್ಲಿ ಕಕ್ಕಸ್ಸು ಸಾಗಿಸ್ತಾರಂತೆ ಕಣಾ' ಎಂದ. 'ಹೂ ಇದು ಸಾಗಿಸೋದು ವಾಸಿ. ಪಿಟ್ಟಲ್ಲಿ ನೀರ ತರಹ ಸಾಗಸೋದು ವಸಿ ಕಷ್ಟನಂತೆ ನಮ್ಮ ಭಾಮೈದ ಅಲ್ಲೊನಲ್ಲಾ ಅವ ಹೇಳ್ತಿದ್ದ. ಸರಿ ನಾ ವಂಡತಿನಿ. ನೀ ಬೇಸ್ತಾರ ವತ್ತಾರಿಕ್ಕೇ ಬಂದುಬಿಡು' ಅಂತ ಚಿನ್ನಣ್ಣ ಎದ್ದ. 'ಅಣ್ಣಾ ವಸಿ ದುಡ್ಡಿದ್ರೆ ಕೊಟ್ಟಿರು. ಬೆಸ್ತಾರ ಕೂಲಿಲಿ ಕಳಕೊಳ್ಳುವಂತೆ' ಅಂತ ದೈನಿಸಿ ದನಿಯಲ್ಲಿ ಅಪ್ಪ ಅವನ ಮುಂದೆ ಕೈಯೊಡ್ಡಿದ. ಚಿನ್ನಣ್ಣ, 'ಹೇ ನಾನೇ ಖಾಲಿ. ನಿಂಗೆನಲಾ ಕೊಡ್ಲಿ?' ಅಂತ ಬೀಡಿ ಸೇದುಕೊಂಡೇ ದಾರಿ ಹಿಡಿದ. ಅಪ್ಪ 'ಯಾರ ಕಕ್ಕಸ್ಸು ಬಳಿದ್ರೂ ಖಾಲಿ ಹೊಟ್ಟೆಲಿ ಭಂಗ ಮಾಡೋದು ತಪ್ಪಲಿಲ್ಲ ನೋಡು' ಅಂತ ಸೇಂದಿ ಅಂಗಡಿ ದಾರಿ ಕಡೆ ನೋಡಿದ. 'ಅಲ್ಲೂ ನಯಾ ಪೈಸೆ ದಕ್ಕಕ್ಕಿಲ್ಲ ಬುಡು' ಅಂತ ಅವ್ವ ಗೊಣಗಿ ನನ್ನ ಕೈಗೆ ತಗ್ಗೊಗಿರೋ ಪಾತ್ರೆ ಒಂದನ್ನು ಕುಕ್ಕಿ 'ಚಲಿ ಹಂಗೆ ಆ ಬ್ರಾಹ್ಮರು, ಜೈನರು, ಸೆಟ್ರು ಬೀದಿಗೆ ಹೋಗಬಾರಮ್ಮ ತಿನ್ನಕ್ಕೆನಾದ್ರೂ ದಕ್ಕತಾದೇನೋ ನೋಡಾನಾ. ಊರಾಗೆ ಹಾಳಾದ್ ಒಂದು ಮದ್ವೆ, ದೇವರ ಕಾರ್ಯನಾದ್ರೂ ಬೇಡ್ವಾ?' ಅಂತ ಬೆರಳು ಮುರಿದು ಪರಪರ ತಲೆ ಕೆರೆದುಕೊಂಡ್ಲು.

ಆಗೆಲ್ಲಾ ನಾನು ನನ್ನ ದೈನೇಸಿ ಮುಖವನ್ನು ಮತ್ತಷ್ಟು ಕುಗ್ಗಿಸಿ ದೊಡ್ಡ ದನಿಯಲ್ಲಿ ಆ ಬೀದಿಗಳಲ್ಲಿ ಸುತ್ತಾಡಿ 'ಅವ್ವಾ ಕವಳಾ...' ಅಂತ ರಾಗವಾಗಿ ಕೂಗುವೆ. ಕೊಡುವ ತನಕ ಒಂದು ಮನೆ ಮುಂದೆಯಿಂದ ಸರಿತಿರಲಿಲ್ಲ. ನನ್ನ ಕೂಗಿಗೆ ಬೇಸತ್ತು ತಂಗಳು ತಂದು ಸುರಿತಿದ್ರು. ನಂಗೆ ಕವಳ ಬೇಡೋಕ್ಕೆ ಯಾಕೆ ಕುಸಿ ಆಯ್ತಿತ್ತು ಅಂದ್ರೆ ಪಾತ್ರೆಗೆ ತಂಗಳು ಬೀಳ್ತಿದಂಗೆ ನಾನು ಮೊದಲು ಉಂಬುತ್ತಿದ್ದೆ. ಆಮೇಲೆ ಆದೇ ಖಾಲಿ ಪಾತ್ರೆ ಹಿಡಿದು ಮತ್ತೊಂದು ಮನೆ ಮುಂದೆ ನಿಂರ್ತಿತ್ತಿದ್ದೆ. ಬ್ರಾಹ್ಮರ ಬೀದಿಲಿದ್ದ ಜಾನಕಮ್ಮ ಬಾಳ ಒಳ್ಳೆ ಹೆಂಗಸು. ಹಳಸಿದ್ದು ಕೊಡ್ತಾ ಇರ್ನಿಲ್ಲ. ತಂಗಳೇ ಹಾಕಿದ್ರು ಚೆನ್ನಾಗಿರೋದು. ಆ ಯಮ್ಮನ ಕೈ ಅಡಿಗೆ ತಂಗಾಳದ ಮೇಲೇ ಇಷ್ಟ್ ಚಂದಾಗಿರೋದಾದ್ರೆ ಬಿಸಿ ಅಡಿಗೆ ಹೆಂಗಿರಬೌದು ಅಂತ ಲೆಕ್ಕ ಹಾಕುವೆ. ಅದಕ್ಕೆ ಅವರ ಮನೆಗೆ ಮೊದಲು ನಾ ಹೋಗಿ ಕವಳ ಅನ್ನುವೆ. ಜಾನಕಮ್ಮ ನಾಕು ಮಾತಾಡಿ ನಿಮ್ಮ ಅವ್ವ, ಅಪ್ಪ ಎಲ್ಲಿ ಅನ್ನೋರು. ಆಯಮ್ಮ ನನ್ನನ್ನು ಮನುಸ್ರು ತರಹ ನೋಡ್ತಾರೆ ಅನ್ನೋದು ಆ ಚಿಕ್ಕ ವಯಸ್ಸಿಗೆ ನಂಗೆ ಅರ್ಥ ಆಗೋದು.

ಅವ್ವ ಮನೇಲಿ ಮೂರು ಗಂಡು ಮಕ್ಕಳಿದ್ರೂ ಕವಳ ಕೇಳಲು ಕಳಿಸ್ತಿರಲಿಲ್ಲ. ಅವರ ಮಖ ನೋಡಿದ್ರೆ ಅನ್ನ ಹಾಕಕಿಲ್ಲ ಕಣಮ್ಮಿ ನೀನೇ ಹೋಗು ಅನ್ನೋಳು. ಸೆಟ್ರು ಬೀದಿಲಿ ಒಂದ್ ಮನೆ ಇತ್ತು. ಆ ವಯ್ಯ ಭಾರೀ ಕುಳ. ಮನೆ ಹಿಂದಕ್ಕೆ, ಮುಂದೆ ತರಾವರಿ ಘಮಲು ಹೂ ಗಿಡ ಹಾಕಿದ್ದ. ನಂಗೋ ಆ ಹೂವ ಯಾವು ಅಂತಾನೂ ಗೊತ್ತಿರಲಿಲ್ಲ. ಆದ್ರೂ ಘಮಲು ಅಂದ್ರೆ ಪ್ರಾಣ. ಸಂಜೆ, ವತ್ತಾರೆ ಎಂತ ಘಮಲು... ಹಂಗೆ ನಿಂತಲ್ಲೇ ನಿಂತಿರುವೆ. ಅವ್ವನ್ನ ಬಂದು ಕೇಳಿದ ಮೇಲೆ ತಿಳಿತು. ಅದು ಮಲ್ಲಿಗೆ ಅಂತ. ನಿತ್ಯ ಮಲ್ಲಿಗೆ, ಸೂಜಿ ಮಲ್ಲಿಗೆ, ಮೈಸೂರು ಮಲ್ಲಿಗೆ, ಜಾಜಿ, ಏಳು ಸುತ್ತಿನ ಮಲ್ಲಿಗೆ ಮತ್ತೆ ಮಂಗಳೂರು ಮಲ್ಲಿಗೆ ಅಂತ ಎಷ್ಟೊಂತರಿ ಗಿಡ. ಒಂದಿನ ಅವ್ವಂಗೆ ಅವರ ಮನೆ ತೋರ್ಸಿ ಕೇಳಿದ್ದೆ, 'ಇವರ ಮನೆ ಗೊಬ್ಬರ ನಾವು ಯಾವಾಗ ಹೊರೋದು' ಅಂತ. 'ಇಲ್ಲ ಇವರ ಮನೆ ಗೊಬ್ರ ನಿಮ್ಮ ದೊಡ್ಡಪ್ಪನ ಮನೆಯೋರು ಹೊರೋದು' ಅಂದ್ಲು ಅವ್ವ. ಹೆಂಗಾರ ಮಾಡಿ ಗಿಡದ ಅತ್ರ ಹೋಗಿ ಆ ಹೂವಿನ ಘಮಲು ಜಾಸ್ತಿ ಈ ಮೂಗಿನ ವಳ್ಳೆ ಒಳಗೆ ಹೋಗಂಗೆ ಎಳಕಬೇಕಲ್ಲವ್ವೋ' ಅಂದೆ. 'ಮುಚ್ಚಕಂಡು ನಡಿ' ಅಂತ ದಬ್ಬಿ ಕರಕೊಂಡು ಬಂದಿದ್ಲು ಅವ್ವ.

ನಾನು ಅಂದುಕೊಂಡ ಆಸೆ ಆ ದೇವರಿಗೆ ಅದೇನು ಕೇಳಿತೋ ಕಾಣೆ. ದೊಡ್ಡಪ್ಪನ್ನ, ಚಿನ್ನಣ್ಣ ಗೊಬ್ಬರ ಹೊರುವುದಕ್ಕೆ ಕರದವನಂತೆ ಅಂತ ಕಿವಿಗೆ ಬೀಳ್ತಿದಂಗೆ ನಾನು ದೊಡ್ಡಪ್ಪನ ಗುಡಿಸಲ ಮುಂದಿದ್ದೆ. ನಾನು ಬತ್ತಿನಿ ಅಂತ ಹಠ ಹಿಡಿದೆ. ಅದಕ್ಯಾಕ್ ಗೋಗರಿತಿ ಬಾ ಅಂತ ದೊಡ್ಡವ್ವ ಭರವಸೆ ಕೊಟ್ಟು. ರಾತ್ರಿ ಕನಸ್ನಾಗೆಲ್ಲಾ ಮಲ್ಲಿಗೆ ಹೂವನ್ನ ಮುಟ್ಟಿದಂಗೆ, ಘಮಲು ತಗಂಡಂಗೆ ಕನಸೋ ಕನಸು. ವತ್ತಾರೆನೇ ಇನ್ನು ದೊಡ್ಡಪ್ಪ ಕ್ಯಾಕರಿಸಿರಲಿಲ್ಲ ಹಟ್ಟಿಲಿ ಇದ್ದೆ. ಬಂದ್ಯಾ ಬಾ ಅಂತ ದೊಡ್ಡಪ್ಪ ಸಲಿಕೆ, ಮಂಕರಿ ತಂಗಂಡು ನಾಕ್ಕೈದು ಜನರ ಜೊತೆ ಹೊಂಟ. ನಾನೂ 'ಮೂಳೆ ಹಿಂದಿನ ನಾಯಿಯಂಗೆ' ಹೊಂಟೆ. ಸೆಟ್ರು ಮನೆ ಮುಂದೆ ಇನ್ನು ಸರಿ ಬೆಣಕೂ ಆಗಿರ್ನಿಲ್ಲ ನಾವಿದ್ವಿ. ಚಿಣ್ಣಪ್ಪ ಬರೋ ತನಕ ಆ ಘಮಲು ಮಲ್ಲಿಗೆಯನ್ನ ಮೂಗಿಗೆ ಎಳಕಂತಿದ್ದೆ. ಹಸಿರು ಗಿಡದ ತುಂಬಾ ಬೆಳ್ಳನ್ನ ಕೋಳಿ ಮಟ್ಟೆಯಂಗೆ ಅರಳಿದ್ದ ಹೂವನ್ನ ಹಂಗೇ ಕಣ್ಣ ತುಂಬಕತ್ತಿದ್ದೆ. ದೊಡ್ಡಪ್ಪ ನಡಿ ಹಿಂಬಾಗಿಲಿಗೆ ಅಂತ ಕರೆದೊಯ್ದ. ಅಲ್ಲಿ ಗುಂಡಿಯಲ್ಲಿ ದೊಡ್ಡಪ್ಪ, ಮುನಿಯಣ್ಣ ಇಳಿದ್ರು. ನಾನು, ಗಿರಿಯಕ್ಕ, ದೊಡ್ಡವ್ವ ಅವರು ತುಂಬಿಕೊಟ್ಟಿದ್ದನ್ನ ಮಂಕರಿಲಿ ಗಾಡಿಗೆ ಸಾಗಿಸಿದ್ವಿ. ಅರ್ಧ ದಿನ ಅದೇ ಕೆಲಸ. ಮೈಮೇಲೆಲ್ಲಾ ಕಕ್ಕಸ್ಸಿನ ಅಭಿಷೇಕ. ಕೆಟ್ಟ ವಾಸನೆ. ಮೊದಲು ಅಸಹ್ಯ ಆಗ್ತಾ ಇದ್ದಿದ್ದು ಈಗ ರೂಢಿಯಾಗಿತ್ತು. ಗುಂಡಿ ಖಾಲಿ ಆದ ಮೇಲೆ ನಾವೆಲ್ಲ ಮೈ ತೊಳಕಳ್ಳಕ್ಕೆ ಅಂತ ಹಟ್ಟಿ ದಾರಿ ಹಿಡಿದ್ವಿ. ನಾನು ಮತ್ತೆ ಮುಂಭಾಗಕ್ಕೆ ಬಂದೆ. ಮಲ್ಲಿಗೆಯ ಘಮಲು ಮೂಗಿಗೆ ಇಳಿತಾನೇ ಇಲ್ಲ. ಬರೀ ಕಕ್ಕಸ್ಸಿನದೇ ವಾಸನೆ. ದೊಡ್ಡವ್ವ,'ನಿನ್ನ ಮುಖಕಿಷ್ಟು, ನಡಿ ಹೋಗುವ ಘಮಲೆಲ್ಲಿ ಬಂದಾದು ಹೂವಿಂದು. ನಿಂದೇ ತಿಕಮಕ ವಾಸನೆ ನಡಿಯಮ್ಮಿ' ಎಂದು ನೂಕಿಕೊಂಡೆ ಬಂದಳು.

ದೊಡ್ಡವಳಾದ ಮೇಲೆ ನಾಕು ದಿನನು ತಡಿದೆ ಅಪ್ಪ ಕೆ.ಆರ್.ನಗರದ ಸಂಕ್ರನಿಗೆ ಮದ್ವೆ ಮಾಡಿದ. ಅವನೂ ಅಲ್ಲಿ ಮುನಿಸಿಪಾಲ್ಟಿಲಿ ಕೆಲಸ ಮಾಡೋವ. ಮದುವೆಗೆ ನಂಗೆ ಮಲ್ಲಿಗೆ ಹಾರನೇ ಬೇಕು ಅಂತ ಅವ್ವಂಗೆ ಹೇಳಿದ್ದೆ. ಅವ್ವ ಕಾಸಿಲ್ಲ ಕಣಾ ಅಂತ ಚೆಂಡುವಿನ ಹಾರ ಹಾಕಿಸಿದ್ಲು. ರಾತ್ರಿ ಸಿನಿಮಾದಾಗೆ ಮುಡಿಯಂಗೆ ಹೂ ಮುಡಿಸ್ತಾರೇನೋ ನಂಗೆ, ಮಂಚಕ್ಕೆ ಅಂತ ಕನಸು ಕಂಡಿದ್ದೆ. ಸಂಕ್ರನ ಗುಡಿಸ್ಲಾಗೆ ನೆಲದಲ್ಲಿ ಕಂಬಳಿ ಹಾಕಕ್ಕೂ ಜಾಗ ಇರ್ನಿಲ್ಲ, ಇನ್ನು ನನ್ನ ತಲೆಗೆ ಹೂವಿನ ಆಸೆ ಹಾಗೇ ಕಟ್ಟಾಕಿ ಅವನ ಮೈಯಾಗೆ ಸೇರಕಂಡಿದ್ದೆ.

ಸಂಕ್ರನ ಗೆಳೆಯ ಬೆಂಗಳೂರಿನಾಗೆ ಕೆಲಸ ಮಾಡೋನು ಇನ್ನಿಲ್ಲದಾಗೆ ಬಾ ಅಂತ ಕರೆದ ಅಂತ ಸಂಕ್ರ ನಾನು ಎರಡು ವರ್ಷದ ಹಿಂದೆ ಬೆಂಗಳೂರಿಗೆ ಬಂದು ಸೇರಿದ್ವಿ. ಇಲ್ಲಿ ನಾನು ಬೀದಿ ಗುಡಿಸೋ ಕೆಲಸಕ್ಕೆ ಅವರಿವರ ಕಾಲಿಡಿದು ಸಂಕ್ರ ಸೇರಿಸಿದ. ಸಂಕ್ರ ಕಾರ್ಪೊರೇಸನ್ನಾಗೆ ಕೆಲಸ ಮಾಡುವ. ಕಕ್ಕಸ್ಸು ಎತ್ತಾಕೋದು ಹೋಗಿ ಬೀದಿ ಗುಡಿಸುವ ಈ ಕೆಲಸ ಭಾಳ ಸಲೀಸು ಅಂತ ಅನ್ನಿಸಿದ್ದು ಈ ಊರಿಗೆ ಬಂದ ಮೇಲೇ. ಸಂಕ್ರ ಮಾತ್ರ ಇನ್ನು ಗುಂಡಿಗಿ ಇಳಿಯೋದು ತಪ್ಪಿರಲಿಲ್ಲ. ಗಳ ತಗಂಡು ಸುತ್ತುವ. 'ಇದ್ಯಾಕ್ ಇನ್ನು ದೈಯನಂಗೆ ಇಲ್ಲೇ ಇದ್ದೀಯಮ್ಮ ಆ ದೇವಸ್ಥಾನದ ಅತ್ರ ಗುಡಿಸಲ್ವಾ?' ಅಂತ ಗುಡುಗಿನಂತ ದನಿಗೆ ಬೆಚ್ಚಿ ಚಲಮ್ಮ ವಾಸ್ತವಕ್ಕೆ ಬಂದಳು. ಗಾಡಿಲಿ ಬಂದ ಮೇಸ್ತ್ರಿ 'ಕೆಲಸ ಮಾಡಕ್ಕೆ ಇಷ್ಟ ಇಲ್ಲ ಅಂದ್ರೆ ಹೇಳು ಬೇರೆಯವರನ್ನ ಬಿಡ್ತೀನಿ' ಅಂದದಕ್ಕೆ ಚಲಮ್ಮ ಮಾತನಾಡದೆ ಪರಕೆಯ ಪರ ಪರ ಶಬ್ದವನ್ನು ಜೋರು ಮಾಡಿದಳು. ಅವನು ಆ ಕಡೆ ಹೋದ ಮೇಲೆ 'ಈ ನನ್ನ ಮಗಂಗೆ ಹಾವ ಕಡಿಯ' ಅಂತ ಶಾಪ ಹಾಕಿ ರಾಮ ದೇವರ ಗುಡಿ ಮುಂದೆ ಬಂದಳು. ಪೂಜಾರಿ ಒಂದು ದೊಡ್ಡ ಬುಟ್ಟಿ ಸಮೇತ ದೇವರ ಮೇಲಿನ ಹೂವನ್ನೆಲ್ಲಾ ತುಂಬಿಸಿಟ್ಟಿದ್ದ. ಅದನ್ನೆಲ್ಲಾ ತನ್ನ ಕಸದ ಗಾಡಿಗೆ ತುಂಬಿಸಿದ ಚಲಮ್ಮ ಅದರಲ್ಲಿದ್ದ ಬಾಡಿದ್ದ ಮಲ್ಲಿಗೆ ಹಾರದಿಂದ ಘಮಲು ಎಳೆದುಕೊಳ್ಳಲು ಪ್ರಯತ್ನಿಸಿದಳು. ಬಾಡಿದ ಹೂವಿಂದ ವಿಚಿತ್ರವಾದದೊಂದು ವಾಸನೆ ಬಂದು ವಾಕರಿಸುವಂತಾಯಿತು.

'ಚಲಮ್ಮ ನೀ ರಾತ್ರಿಗೆ ಅಡಿಗೆ ಮಾಡಬೇಡ' ಅಂತ ಕಾಳವ್ವ ಫೋನ್ ಮಾಡಿದ್ದಳು. ಇಲ್ಲಿಗೆ ಬಂದ ಮೇಲೆ ಇಬ್ಬರತ್ರ ಏನು ಸುತ್ತಲ ಸ್ಲಂನವರ ಬಳಿಯೆಲ್ಲಾ ಬರೀ ಪೋನಿನದ್ದೇ ಜಾತ್ರೆ. ಕದ್ದವು, ಸೆಕೆಂಡ್ ಹ್ಯಾಂಡ್ ಹೀಗೆ ದೊಡ್ಡ, ಚಿಕ್ಕ ಫೋನ್‌ಗಳೆಲ್ಲಾ ಎಲ್ಲರ ಬಳಿಯೂ ಇದ್ದವು. ಕಾಳವ್ವ ಪಕ್ಕದ ಶೆಡ್‌ನವಳು. ಮದುವೆ ಮನೆಯಲ್ಲಿ ಎಲೆ ಎತ್ತಲು ಹೋಗುತ್ತಿದ್ದ ಕಾಳವ್ವ ಹೀಗೆ ಒಂದೊಂದು ದಿನ ಅವರ ಏರಿಯಾಗೆ ಫೋನ್ ಮಾಡಿ ಹೇಳುವುದಿದೆ. ಮಿಕ್ಕ ಊಟವನ್ನು ದೊಡ್ಡ ದೊಡ್ಡ ಪಾತ್ರೆಗಳಲ್ಲಿ ತುಂಬಿಸಿ ತಂದು ಅಕ್ಕಪಕ್ಕದವರಿಗೆಲ್ಲಾ ಹಂಚುತ್ತಿದ್ದಳು. ಅವಳು ತರುವ ಊಟಕ್ಕೆ ಕಾದು ಹೊಟ್ಟೆ ತುಂಬಿಸಿ ಕೊಳ್ಳುತ್ತಿದ್ದವರು ಕಾಳವ್ವನನ್ನು ಬಾಯಿ ತುಂಬಾ 'ಅನ್ನಪೂರ್ಣೆ' ಎಂದು ಹರಸುತ್ತಿದ್ದರು. ಕಾಳವ್ವ, ಚಲಮ್ಮನಿಗೆ ಹೂ ಎಂದರೆ ಇಷ್ಟ ಎಂದು ಮದುವೆ ಮನೆಯಲ್ಲಿ ಬಿಸಾಕಿದ ಹೂವನ್ನೆಲ್ಲಾ ಒಟ್ಟು ಮಾಡಿ ತಂದು ಕೊಡುತ್ತಿದ್ದಳು. ಚಲಮ್ಮ ಮಾತ್ರ 'ಅಕ್ಕಾ ನಂಗೆ ಮಲ್ಲಿಗೆ ಇದ್ರೆ ಮಾತ್ರ ತಂದುಕೊಡು' ಅಂತ ಗೋಗರೆಯುತ್ತಿದ್ದದ್ದನ್ನು ಕೇಳಿ ಮಲ್ಲಿಗೆ ದಂಡೆ ಸಿಕ್ಕಾಗ ಜತನದಿಂದ ರಾತ್ರಿ ತಂದು ಕೊಡುತ್ತಿದ್ದಳು. ಹಾಗೇ ಹೂ ಸಿಕ್ಕ ದಿನ ತಲೆಬಾಚಿ ಹೂ ಮುಡಿದು ಸಂಕ್ರನ ತೆಕ್ಕೆಗೆ ಸರಿಯಲು ಹೋದರೆ, 'ಅದೆನಮ್ಮಿ ಈ ಊವ ಮುಡಿತಿ. ಕೆಟ್ಟ ವಾಸ್ನೆ' ಅಂತ ಕಳ್ಳುತುಂಬಿದ ಬಾಯಲ್ಲಿ ವದರುತ್ತಿದ್ದ. ಚಲಮ್ಮ ಮಾತ್ರ ಈಗ ತಾನೇ ಅರಳಿದ ಹೂವೇನೋ ಎನ್ನುವಂತೆ ಮುಡಿಗೇರಿಸಿ ಸಂಭ್ರಮಿಸುತ್ತಿದ್ದಳು.

'ನಂಗೆ ಚಿಕ್ಕಂದಿನಿಂದ ಒಂದೇ ಆಸೆ ಕಣಕ್ಕಾ. ದಿನ ಘಮಲು ಸೋಫಾಗೆ ಸ್ನಾನ ಮಾಡಿ, ಒಗೆದ ಬಟ್ಟೆ ಹಾಕ್ಕಂಡು, ಎಣ್ಣೆ ಹಚ್ಚಿ ತಲೆ ಬಾಚಕಂಡು, ದಿನಾ ಘಮಲು ಮಲ್ಲಿಗೆ ದಂಡೆ ಮುಡಕಳ್ಳದು' ಎಂದು ಸಂಜೆ ಕಟ್ಟೆ ಮೇಲೆ ಕುಳಿತು ಕಾಳವ್ವನಿಗೆ